**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಜೇವರಗಿ.**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ 220/2023**

**ಚಾ.ಸಾ-14**

**ಪ್ರಾ.ಸಾ-7**

**ಸಾಕ್ಷಿಗೆ ದಿನಾಂಕ 26-03-2026ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | ಃ | ಪ್ರಿಯಾಂಕಾ |
| ಗಂಡನ ಹೆಸರು | ಃ | ವೇಣುಗೋಪಾಲ |
| ವಯಸ್ಸು | ಃ | 26 ವರ್ಷ |
| ಉದ್ಯೋಗ | ಃ | ಮನೆಕೆಲಸ |
| ವಾಸಸ್ಥಳ | ಃ | ಗುಲ್ಬರ್ಗಾ |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ**

1ನೇ ಆರೋಪಿ ಗೊತ್ತಿಲ್ಲ. 2ನೇ ಆರೋಪಿ ಗೊತ್ತು. ಚಾಸಾ-1, 10 ರಿಂದ 13, 15 ಮತ್ತು 16 ಗೊತ್ತು. ಮೃತ ಸಂಜುಕುಮಾರ ಮತ್ತು ಅಪ್ಪಾರಾಯ ಗೊತ್ತು.

ದಿನಾಂಕ 16-12-2022 ರಂದು ಗುಲ್ಬರ್ಗಾದಿಂದ ಟೂರಿಗೆ ಟಿಟಿ ವಾಹನದಲ್ಲಿ ಚಾಸಾ-1, 10 ರಿಂದ 13, 15 ಮತ್ತು 16 ಹಾಗೂ ನಿಸರ್ಗಾ, ರಕ್ಷಿತಾ, ರುಚಿತಾ, ಕೃಷಿಕಾ, ಆಂಜನೇಯ ರವರು ಹೋಗಿದ್ದೆವು. ಟೂರ್ ಮುಗಿಸಿಕೊಂಡು ದಿನಾಂಕ 24-12-2022 ರಂದು ಬೆಳಗಿನ ಜಾವ 4 ಗಂಟೆಗೆ ಗೌನಳ್ಳಿ ಕ್ರಾಸ್ ಹತ್ತಿರ ಲಾರಿ ಮತ್ತು ಟಿಟಿ ವಾಹನದ ಮಧ್ಯೆ ಅಪಘಾತ ಆಗಿರುತ್ತದೆ. ಲಾರಿ ಚಾಲಕನು ಯಾವುದೇ ಇಂಡಿಕೇಟರ್ ಹಾಕದೇ ನಮ್ಮ ವಾಹನದ ಮುಂದೆ ಇದ್ದನು ನಮ್ಮ ವಾಹನ ಅತಿವೇಗದಲ್ಲಿ ಹೋಗಿ ಗುದ್ದಿರುತ್ತದೆ. ಸದರಿ ಅಪಘಾತದಲ್ಲಿ ಚಾಸಾ-13ರವರಿಗೆ ಕಾಲು ಫ್ಯಾಕ್ಚರ್ ಆಗಿರುತ್ತದೆ.ಚಾಸಾ-10ರವರು ಮೂರು ಫ್ಯಾಕ್ಚರ್ ಆಗಿರುತ್ತದೆ. ಚಾಸಾ-12ರವರಿಗೆ ಮೂಗು ಬಾಯಿ ಕಾಲಿಗೆ ಫ್ಯಾಕ್ಚರ್ ಆಗಿರುತ್ತದೆ. ಸದರಿ ಅಪಘಾತದಲ್ಲಿ ನನ್ನ ಗಲ್ಲದ ಹತ್ತಿರ ಕಟ್ ಆಗಿ ಹೊಲಿಗೆ ಬಿದ್ದಿರುತ್ತದೆ. ನನ್ನ ಮಗಳು ಕೃಷಿಕಾಳ ಕಾಲು ಫ್ಯಾಕ್ಚರ್ ಆಗಿರುತ್ತದೆ. ಚಾಸಾ-1ರವರಿಗೆ ತಲೆಯ ಹಿಂದೆ ಪೆಟ್ಟಾಗಿತ್ತು. ರಾಜೇಶ್ವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದವು. ಅಪಘಾತವಾದ ನಂತರ ನಮಗೆ ಜೇವರ್ಗಿಯ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದರು. ಜೇವರ್ಗಿ ಆಸ್ಪತ್ರೆಯಿಂದ ಗುಲ್ಬರ್ಗಾದ ಬಸವೇಶ್ವರ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಅಲ್ಲಿಂದ ಗುಲ್ಬರ್ಗಾ ಕಾಮರೆಡ್ಡಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಲಾರಿ ನಂ.ಕೆಎ-22 ಸಿ-3233 ಇತ್ತು. ನಮ್ಮ ಟಿಟಿ ವಾಹನದ ನಂ.ಕೆಎ-68-

1323 ಇತ್ತು. ಅಪಘಾತವು ಎರಡು ವಾಹನಗಳ ಚಾಲಕರ ತಪ್ಪಿನಿಂದ ಆಗಿರುತ್ತದೆ. ಅಪಘಾತದ ವಿಷಯವನ್ನು ಪೊಲೀಸರ ಮುಂದೆ ಹೇಳಿರುತ್ತೇನೆ. ಸದರಿ ವಾಹನಗಳನ್ನು ನೋಡಿದರೆ ಗುರುತಿಸುತ್ತೇನೆ.

ಸಾಕ್ಷಿಗೆ ನಿಪಿ-2 ರಿಂದ 11 ಲಾರಿ ಇರುವ ಫೋಟೊಗಳನ್ನು ಮತ್ತು ನಿಪಿ-12 ರಿಂದ 19 ಟಿಟಿ ವಾಹನ ಇರುವ ಫೋಟೊಗಳನ್ನು ನೋಡಿ ಗುರುತಿಸಿರುತ್ತಾರೆ.

(ಮಾನ್ಯ ಸ.ಸ.ಅ ರವರು ಸಾಕ್ಷಿ ಭಾಗಶಃ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದಾರೆ ಹಾಗಾಗಿ ಅವರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಘೋಷಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿದ್ದು, ಮುಖ್ಯ ವಿಚಾರಣೆಯಲ್ಲಿ ಸಾಕ್ಷಿ ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರೀಕ್ತವಾಗಿ ಸಾಕ್ಷ್ಯ ನುಡಿದಿರುವುದು ಮೇಲ್ನೋಟಕ್ಕೆ ಕಂಡುಬಂದಿರುವ ಕಾರಣ ಮಾನ್ಯ ಅಭಿಯೋಜನೆಯವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**<u>ಪಾಟೀ ಸವಾಲುಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ</u>**

ಅಪಘಾತವಾದ ದಿನ 1ನೇ ಆರೋಪಿಯು ಯಾವುದೇ ಇಂಡಿಕೇಟರ್ ಇಲ್ಲದೇ ಒಮ್ಮೆಲೇ ಬ್ರೇಕ್ ಹಾಕಿದನು ಎಂದರೆ ಸರಿ. ಆಗ ಟಿಟಿ ಚಾಲಕನು ನಿರ್ಲಕ್ಷತನದಿಂದ ಚಾಲನೆ ಮಾಡಿ ಡಿಕ್ಕಿಪಡಿಸಿರುತ್ತಾನೆ ಎಂದರೆ ಸರಿ. ಲಾರಿ ಚಾಲಕನ ಹೆಸರು ಲಕ್ಕಪ್ಪ ಎಂದು ನಿಮ್ಮ ಹೇಳಿಕೆಯಲ್ಲಿ ಬೆರಸಿದ್ದೀರಿ ಎಂದರೆ ಸರಿಯಲ್ಲ.

**ಆರೋಪಿ ಪರ ವಕೀಲರು ಗೈರು ಹಾಜರು ಇದ್ದ ಕಾರಣ ಸಾಕ್ಷಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು ಜೇವರಗಿ

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಜೇವರಗಿ.**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ 220/2023**

**ಚಾ.ಸಾ-15**

**ಪ್ರಾ.ಸಾ-8**

**ಸಾಕ್ಷಿಗೆ ದಿನಾಂಕ 26-03-2026ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | ಃ | ಸಂಜಯಕುಮಾರ |
| ತಂದೆಯ ಹೆಸರು | ಃ | ನಾಗೇಂದ್ರಪ್ಪ |
| ವಯಸ್ಸು | ಃ | 25 ವರ್ಷ |
| ಉದ್ಯೋಗ | ಃ | ವಿದ್ಯಾರ್ಥಿ |
| ವಾಸಸ್ಥಳ | ಃ | ಹಾಗರಗುಂಡಗಿ |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ**

1ನೇ ಆರೋಪಿ ಗೊತ್ತಿಲ್ಲ. 2ನೇ ಆರೋಪಿ ಗೊತ್ತು. ಚಾಸಾ-1, 10 ರಿಂದ 14 ಮತ್ತು 16 ಮತ್ತು 18 ಗೊತ್ತು. ಮೃತ ಸಂಜುಕುಮಾರ ತಂದೆ ರಾಮಚಂದ್ರ ಮತ್ತು ಮೃತ ಅಪ್ಪಾರಾಯ ಗೊತ್ತು.

ದಿನಾಂಕ 16-12-2022 ರಂದು ಹಾಗರಗುಂಡಗಿಯಿಂದ ಟೂರಿಗೆ ಹೋಗಿ ಮರಳಿ ದಿನಾಂಕ 24-12-2022 ರಂದು ಬೆಳಗಿನ ಜಾವ 4 ಗಂಟೆಗೆ ಗೌನಳ್ಳಿ ಕ್ರಾಸ್ ಹತ್ತಿರ ಒಂದು ಲಾರಿ ಇಂಡಿಕೇಟರ್ ಹಾಕದೇ ಹೊರಟಿದ್ದಾಗ ನಮ್ಮ ವಾಹನ ಕಂಟ್ರೋಲ್ ತಪ್ಪಿ ಲಾರಿಗೆ ಗುದ್ದಿರುತ್ತದೆ. ಸದರಿ ಅಪಘಾತದಲ್ಲಿ ಚಾಸಾ-13ರವರಿಗೆ ಕಾಲು ಮುರಿದಿತ್ತು. ಚಾಸಾ-12ರವರಿಗೆ ದವಡೆ ಮುರಿದಿರುತ್ತದೆ, ಮೂಗು ಫ್ರ್ಯಾಕ್ಚರ್ ಆಗಿರುತ್ತದೆ. ಚಾಸಾ-10ರವರ ಮೂಗು ಫ್ರ್ಯಾಕ್ಚರ್ ಆಗಿರುತ್ತದೆ. ಚಾಸಾ-11ರವರ ಬೆನ್ನಿನ ನರ ಮುರಿದಿತ್ತು. ಚಾಸಾ-11 ರವರು 4 ತಿಂಗಳ ನಂತರ ತೀರಿಕೊಂಡಿರುತ್ತಾರೆ. ಚಾಸಾ-14ರವರಿಗೆ ದವಡೆಯ ಹಲ್ಲು ಮುರಿದಿತ್ತು ಬಾಯಿ ಹತ್ತಿರ ಗಾಯವಾಗಿತ್ತು. ಕೃಷಿಕಾಳಿಗೆ ಕಾಲು ಮುರಿದಿತ್ತು. ಉಳಿದವರಿಗೆ ಅಲ್ಲಲ್ಲಿ ಗಾಯಗಳಾಗಿದ್ದವು.

ಅಪಘಾತವಾದ ನಂತರ ಜೇವರ್ಗಿಯ ಸರಕಾರಿ ಆಸ್ಪತ್ರೆಗೆ ಬಂದಿರುತ್ತೇವೆ. ನಂತರ ಅಲ್ಲಿಂದ ಕಲ್ಬುರ್ಗಿಯ ಬಸವೇಶ್ವರ ಆಸ್ಪತ್ರೆಗ ಹೋಗಿರುತ್ತೇವೆ ಅಲ್ಲಿ ವೈದ್ಯರು ಇರಲಿಲ್ಲ ಆದ್ದರಿಂದ ಕಲ್ಬುರ್ಗಿಯ ಕಾಮರೆಡ್ಡಿ ಆಸ್ಪತ್ರೆಗೆ ಹೋಗಿರುತ್ತೇವೆ. ಲಾರಿ ಚಾಲಕನು ಒಮ್ಮೆಲೇ ಬ್ರೇಕ್ ಹಾಕಿದ್ದರಿಂದ ಅಪಘಾತ ಆಗಿರುತ್ತದೆ.

ಲಾರಿ ನಂ.ಕೆಎ-22 ಸಿ-3233 ಆಗಿತ್ತು. ಟಿಟಿ ನಂ.ಕೆಎ-68-1323 ಆಗಿತ್ತು. ಅಪಘಾತದ

ವಿಚಾರವನ್ನು ಪೊಲೀಸರ ಮುಂದೆ ಹೇಳಿರುತ್ತೇನೆ.

ಸದರಿ ವಾಹನಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ನಿಪಿ-2 ರಿಂದ 11 ಲಾರಿ ಇರುವ ಪೋಟೊಗಳನ್ನು ಮತ್ತು ನಿಪಿ-12 ರಿಂದ 19 ಟಿಟಿ ವಾಹನ ಇರುವ ಪೋಟೊಗಳನ್ನು ನೋಡಿ ಗುರುತಿಸಿರುತ್ತಾರೆ.

(ಮಾನ್ಯ ಸ.ಸ.ಅ ರವರು ಸಾಕ್ಷಿ ಭಾಗಶಃ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದಾರೆ ಹಾಗಾಗಿ ಅವರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಘೋಷಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿದ್ದು, ಮುಖ್ಯ ವಿಚಾರಣೆಯಲ್ಲಿ ಸಾಕ್ಷಿ ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರೀಕ್ತವಾಗಿ ಸಾಕ್ಷ್ಯ ನುಡಿದಿರುವುದು ಮೇಲ್ನೋಟಕ್ಕೆ ಕಂಡುಬಂದಿರುವ ಕಾರಣ ಮಾನ್ಯ ಅಭಿಯೋಜನೆಯವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**<u>ಪಾಟೀ ಸವಾಲುಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ</u>**

ನೀವು ಪ್ರಯಾಣಿಸುತ್ತಿದ್ದಂತಹ ಟಿಟಿ ವಾಹನದ ಚಾಲಕನು ನಿರ್ಲಕ್ಷತನದಿಂದ ಚಾಲನೆ ಮಾಡಿ ಡಿಕ್ಕಿಪಡಿಸಿರುತ್ತಾನೆ ಎಂದರೆ ಸರಿ. ಲಾರಿ ಚಾಲಕನ ಹೆಸರು ಲಕ್ಕಪ್ಪ ಎಂದು ನಿಮ್ಮ ಹೇಳಿಕೆಯಲ್ಲಿ ಬೆರಸಿದ್ದೀರಿ ಎಂದರೆ ಸರಿ.

**ಆರೋಪಿ ಪರ ವಕೀಲರು ಗೈರು ಹಾಜರು ಇದ್ದ ಕಾರಣ ಸಾಕ್ಷಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು ಜೇವರಗಿ